# ಮಹಿಳಾ ವಿಶೇಷ

## MAHILA VISHESHA

**ಕನ್ನಡ ತಿಂಗಳ ಪತ್ರಿಕೆ** **ಸೆಪ್ಟೆಂಬರ್ 1-30 2016**

KANNADA MONTHLY SEPTEMBER 1-30 2016

ಸಂಪುಟ 2, ಸಂಚಿಕೆ 1 ಪುಟ : 24, ಬೆಲೆ : ರೂ. 5–00

Vol. 2, Issue 1, Pages: 24, Price : Rs. 5-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



ಒಳಪುಟಗಳಲ್ಲಿ

ಸ್ವಾತಂತ್ರ್ಯದ ಗಂಗೆಯಲ್ಲಿ ವಿದೇಶೀ ತೊರೆಗಳು – ಪು.5

ಸಾಮಾಜಿಕ ಬದಲಾವಣೆಯಲ್ಲಿ ಮಹಿಳೆಯರ ಪಾತ್ರ – ಪು.7

ಸರ್ಕಾರದ ಕೆಲಸ ದೇವರ ಕೆಲಸ – ಪು.9

ಕಳಲೆ ಧಾರ್ಮಿಕ ಕ್ಷೇತ್ರದ ಪರಿಚಯ – ಪು. 11

ಖಾಲಿ ಹುದ್ದೆಗಳ ಸಂಕ್ಷಿಪ್ತ ಮಾಹಿತಿ – ಪು. 17

ಅನಘಾ ವಿಶ್ವ ಚಾಂಪಿಯನ್‌ಷಿಪ್‌ಗೆ ಆಯ್ಕೆ – ಪು. 21

ತೆರೆದ ಅಂಚೆ





ಮಹಿಳಾ ಪತ್ರಿಕೆಯೊಂದು ಮೈಸೂರು ನಗರದಿಂದ ಆರಂಭವಾಗುತ್ತಿರುವುದು ಸಂತಸದ ವಿಚಾರ. ಮಹಿಳಾ ವಿಶೇಷ ತಿಂಗಳ ಪತ್ರಿಕೆಗೆ ಉಜ್ವಲ ಭವಿಷ್ಯವಿದೆ. ಆರಂಭಿಕ ಸಂಚಿಕೆಗೆ ಶುಭಾಶಯಗಳು.

**MANGALDEEP JEWELLERS**

L-46/B1, Ashoka Road
Opposite Kanaka Mahal Choultry
Mysore 570 001
Ph: 081-4269087, 2525605
Mob.: 99451-11915

Dealers in:
**91.6 Hallmark Jewellery and**
**92.5 Silver Fancy Articles**

ಮಹಿಳಾ ವಿಶೇಷ ತಿಂಗಳ ಪತ್ರಿಕೆಯ ಉದ್ಭವ ನಿಜಕ್ಕೂ ಸಂತೋಷ. ಮಹಿಳೆಯರು ಪತ್ರಿಕೆಯ ಬಳಗಕ್ಕೆ ಸ್ಪಂದಿಸಿ ಪತ್ರಿಕೆಯನ್ನು ಪ್ರೋತ್ಸಾಹಿಸಿಬೆಳೆಸಿ. ಗೌರಿ ಗಣೇಶ ಹಬ್ಬದ ಶುಭಾಶಯಗಳು.

**SRINIDHI DIAMONDS**

No. 945 L9/1, K.R. Hospital Road
Mysore 570 001.

**C.N. Raghavendra**
Mob.: 99720-38494

Dealers in:
**Smithy Tools & Jewel Boxes, Stones**
**Pearls, Birth Stones, Swiss A.D., Zercon**

## ನನ್ನ ಮಾತು



ಮೈಸೂರು ಸಾಂಸ್ಕೃತಿಕ ರಾಜಧಾನಿ. ಇದಕ್ಕೆ ವಿಶಿಷ್ಟ ಸ್ಥಾನ ಮಾನವಿದ್ದು ಅದಕ್ಕೆ ಅನೇಕ ಮಹಿಳೆಯರು ಕಾರಣಕರ್ತರಾಗಿರುತ್ತಾರೆ. ಇದು ಅರಮನೆ ನಗರಿಯೂ ಹೌದು. ಸುಂದರ ನಗರವೂ ಹಾಗೂ ಸ್ವಚ್ಛ ನಗರಿಯೂ ಹೌದು.

ಮೈಸೂರು ನಗರದಿಂದಲೇ ಸೆಪ್ಟೆಂಬರ್ 2015ರಿಂದ **ಮಹಿಳೆ ವಿಶೇಷ** ವಾರಪತ್ರಿಕೆಯನ್ನು ಆರಂಭಿಸಿದ್ದು ಸಹಕರಿಸಿದವರೆಲ್ಲರಿಗೂ ನಮ್ರತೆಯಿಂದ ವಂದನೆಗಳು. ಈಗ ಅಂದರೆ ಸೆಪ್ಟೆಂಬರ್ 2016ರಿಂದ ತಿಂಗಳ ಪತ್ರಿಕೆಯಾಗಿ ಪ್ರಕಟವಾಗಲಿದೆ. ಇದಕ್ಕೆ ಸ್ತ್ರೀ-ಪುರುಷರ ಸಹಕಾರ, ಜಾಹೀರಾತುದಾರರ ಸಹೃದಯತೆ ಇನ್ನು ಮುಂದೆಯೂ ನಿರಂತರವಾಗಿರಲಿ.

ಈ ಪತ್ರಿಕೆ ಮಹಿಳೆಯರಿಗೆ ಸ್ಫೂರ್ತಿಯನ್ನು ತುಂಬುವ ಕೆಲಸ ಮಾಡುತ್ತದೆ. ಎಲೆ ಮರೆ ಕಾಯಿಯಂತಿರುವ ಮಹಿಳೆಯರನ್ನು ಗುರುತಿಸಿ ಅವರ ಪ್ರತಿಭೆಯನ್ನು ಬೇರೆಯವರಿಗೆ ಮಾದರಿಯಾಗಿರಲು ಶ್ರಮ ವಹಿಸುತ್ತದೆ. ಮಹಿಳಾ ವಿಶೇಷ ಬಳಗವನ್ನು ವಿಸ್ತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು ನಿಮ್ಮ ಎಲ್ಲ ರೀತಿಯ ಸ್ಪಂದನೆ ಅಗತ್ಯವಾಗಿದೆ.

ಇದೇ ಮಾಹೆಯಲ್ಲಿ ಬರಲಿರುವ ಗೌರಿ ಗಣೇಶ ಹಬ್ಬ, ಸಂತ ಮೇರಿ ಹಬ್ಬ, ಬಕ್ರೀದ್ ಹಬ್ಬ, ಶಿಕ್ಷಕರ ದಿನಾಚರಣೆ, ಇಂಜಿನಿರ್ ದಿನಾಚರಣೆ, ಡಾಟರ್ಸ್ ಡೇ ಪ್ರಯುಕ್ತ ಮಹಿಳೆಯರಿಗೆ, ಓದುಗರಿಗೆ, ಜಾಹೀರಾತುದಾರರಿಗೆ, ಪ್ರೋತ್ಸಾಹ ನೀಡುವವರಿಗೆ ಹೆಚ್ಚು ಆಯುರಾರೋಗ್ಯ ಐಶ್ವರ್ಯ ದೊರಕಲಿ ಎಂದು ಶುಭವನ್ನು ಹಾರೈಸುತ್ತೇನೆ.

**ಹೆಚ್.ವಿ. ಸುಬ್ಬರಾವ್**
ಸಂಪಾದಕರು


**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**
**ಸೆಪ್ಟೆಂಬರ್ 1-30 2016**
KANNADA MONTHLY
SEPTEMBER 1-30 2016
ಸಂಪುಟ 2, ಸಂಚಿಕೆ 1, ಪುಟ: 24
Price/ಬೆಲೆ : ರೂ. 5–00
Vol. 2, Issue 1, Pages: 24



ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**
ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803–34444
ಕಛೇರಿ ವಿಳಾಸ:
ಸಂ. 199ಎ/ಎಫ್ 13ಎ, ಶಂಕರ ಮಠದ ರಸ್ತೆ, ಫೋರ್ಟ್ ಮೊಹಲ್ಲ, ಮೈಸೂರು 570 004
E-mail: mahilavishesha@yahoo.com
Web: www.mahilavishesha.in


**ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ:**
**1-ಮಿನಿಟ್ ಉಮಾರವರೊಂದಿಗೆ ಸಂದರ್ಶನ**
**ಮಧುಮೇಹಕ್ಕೆ ಸಂಬಂಧಿಸಿದ ಮಾಹಿತಿಗಳು**
**ನಾ ಕಂಡ ಕುಸುಮಾ**
**ಇತಿಹಾಸದಲ್ಲಿ ಬರುವ ಮಹಿಳೆಯರು**
**ಸಾಕಾ - ಬೇಕಾ?**
**ಜನಪ್ರತಿನಿಧಿಗಳಿಗೊಂದು ಕಿವಿಮಾತು**

**ಮಹಿಳಾ ವಿಶೇಷ ಬಳಗಕ್ಕೆ ಸೇರಬಯಸುವವರು ಸಂಪಾದಕರನ್ನು ಸಂಪರ್ಕಿಸಿ ಹಾಗೂ ಸಹಕರಿಸಿ.**

**ಈ ಸಂಚಿಕೆಗೆ ಸಹಕಾರ ನೀಡಿದ ಶ್ರೀಮತಿ ವೆಂಕಟಲಕ್ಷ್ಮಮ್ಮ, ಶ್ರೀ ನಿರ್ಮಲ್ ಚಂದ್, ಶ್ರೀ ವಿಜಯರಾವ್ ಹಾಗೂ ಶಂಕರ್ ಜ್ಯೂವೆಲರ್ಸ್ ರವರಿಗೆ ಮ.ವಿ. ಬಳಗ ಹೃತ್ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತದೆ.**





## ಜೂನ್ 2016 ಮೈಸೂರು ಅರಮನೆಯಲ್ಲಿ ನಡೆದ ವಿವಾಹ ಸಂಭ್ರಮ






ರಾಜಾಸ್ಥಾನದ ತ್ರಿಷಿಕಾ ಕುಮಾರಿ ಮೈಸೂರಿನ ಯದುವೀರ್‌ರವರೊಡನೆ ವಿವಾಹ ಸಂದರ್ಭದಲ್ಲಿ ಮೂಡಿಬಂದ ಚಿತ್ರಗಳು. ಮೈಸೂರು ಅರಮನೆಯ ರಾಜಮಾತೆ ಶ್ರೀಮತಿ ಪ್ರಮೋದಾ ದೇವಿ ಹಾಗೂ ರಾಣಿ ತ್ರಿಷಿಕಾ ಯದುವೀರ್‌ರವರು ಮಹಿಳೆಯರ ಪರವಾಗಿರಲಿ. ಒಡೆಯರ್ ಕುಟುಂಬದಲ್ಲಿ ಮಹಿಳೆಗೆ ದೊರೆತ ಸ್ಥಾನಮಾನ ಹಾಗೂ ಅವರು ನೀಡಿದ ಸೇವೆಯನ್ನು ಇನ್ನು ಮುಂದೆಯೂ ರಾಜಮಾತೆ ಹಾಗೂ ರಾಣಿಯವರು ಮುಂದುವರೆಸಲಿ ಎಂಬುದು ಮ.ವಿ. ಬಳಗದ ಆಶಯವಾಗಿದೆ.

## ಸ್ವಾತಂತ್ರ್ಯದ ಗಂಗೆಯಲ್ಲಿ ವಿದೇಶೀ ತೊರೆಗಳು

ಅಹಿಂಸೆಯಿಂದಲೇ ಸ್ವಾತಂತ್ರ್ಯವನ್ನು ಗೆದ್ದುಕೊಂಡ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಮಾನವ ಇತಿಹಾಸದ ಮಹತ್ವದ ಘಟನೆ. ವ್ಯಾಪಾರಕ್ಕೆಂದು ಭಾರತ ನೆಲದಲ್ಲಿ ಕಾಲಿಟ್ಟು ನಂತರ ಇಲ್ಲಿಯ ವ್ಯವಸ್ಥೆಯನ್ನೇ ಕೈಗೆತ್ತಿಕೊಂಡ ಬ್ರಿಟೀಷರ ವಿರುದ್ಧ ಹುಟ್ಟಿಕೊಂಡ ಪ್ರತಿರೋಧ, ಪಡೆದುಕೊಂಡ ಆಯಾಮಗಳು ಹಲವು ಬಗೆ. ಸುಮಾರು ಮೂರು ಶತಮಾನಗಳ ಕಾಲ ಭಾರತವನ್ನು ತನ್ನ ವಸಾಹತು ನೆಲೆಯನ್ನಾಗಿಸಿದ್ದ ಬ್ರಿಟೀಷ್ ಪ್ರಭುತ್ವದ ಮೇಲೆ ಭಾರತೀಯರು ಆಂದೋಲನಕ್ಕಿಳಿದರು. ಹೋರಾಟದ ಸಾಗರಕ್ಕೆ ಅಸಂಖ್ಯ ನದಿಗಳು ಸೇರಿಕೊಂಡವು. ಅವುಗಳಲ್ಲಿ ಇಂಗ್ಲೆಂಡ್‌ನ ತೊರೆಗಳು, ವಿದೇಶಿ ಕಾಲುವೆಗಳು ಇದ್ದದ್ದು ವಿಶೇಷ. ಭಾರತೀಯರಲ್ಲದವರೂ ಭಾರತದ ಬಿಡುಗಡೆಗೆ ಕೈ ಜೋಡಿಸಿದರು. ನಮ್ಮ ದೇಶದ ಸಾಮಾಜಿಕ ಸಾಂಸ್ಕೃತಿಕ ಏಳಿಗೆಗೆ ನೀರೆರೆದರು. ಕೆಲವು ವಿದೇಶೀಯರಂತೂ ಭಾರತವನ್ನು ತಮ್ಮ ಇನ್ನೊಂದು ಮನೆಯನ್ನಾಗಿ ಪರಿಗಣಿಸಿದ್ದೂ ಉಂಟು. ಭಾರತವನ್ನು ತಮ್ಮ ಹೃದಯಕ್ಕೆ ಹತ್ತಿರವಾಗಿಸಿಕೊಂಡ ಪರದೇಶೀಯರು ಭಾರತದಲ್ಲಿ ಸ್ವಯಂ ಆಡಳಿತ ಬರುವಂತೆ ಮಾಡಲು ಆ ಕಾಲದಲ್ಲಿ ರೂಪುಗೊಂಡ ಅನೇಕ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರಲ್ಲದೆ ಸೆರೆವಾಸವನ್ನೂ ಅನುಭವಿಸಿದರು. ಭಾರತೀಯ ಚಳುವಳಿಗಾರರಂತೆ ಕಷ್ಟ-ನಷ್ಟಗಳಿಗೆ ಸಿಕ್ಕಿಬಿದ್ದರು.

ಪ್ರತಿಭಾವಂತ ವಿದ್ಯಾರ್ಥಿ ಎನ್ನಿಸಿಕೊಂಡು ಕೇಂಬ್ರಿಡ್ಜ್‌ನಲ್ಲಿ ಅಭ್ಯಾಸವನ್ನು ಮುಗಿಸಿದ ಸಿ.ಎಫ್. ಆಂಡ್ರೋಸ್ ಕ್ರೈಸ್ತ ಮಿಷನರಿಯಿಂದ ನೇಮಕವಾಗಿದ್ದು ದೆಹಲಿಯ ಸಂತ ಸ್ಟೀಫನ್ ಕಾಲೇಜಿಗೆ. ಭಾರತಕ್ಕೆ ಕಾಲಿಟ್ಟ ಕೆಲವೇ ದಿನಗಳಲ್ಲಿ ಆಂಡ್ರೂಸ್ ಅವರಿಗೆ ಭಾರತೀಯರ ಕಷ್ಟ ಕೋಟಲೆಗಳ ಅರಿವಾಯಿತು. ಸ್ವಾತಂತ್ರ್ಯ ಚಳುವಳಿಯೂ ಅವರ ಅರಿವಿಗೆ ಬಂತು.







ದಾದಾಬಾಯಿ ನವರೋಜಿ ಮತ್ತಿತರರು ಆರಂಭಿಸಿದ್ದ ಸ್ವರಾಜ್ಯ ಆಂದೋಲನಕ್ಕೆ ಒತ್ತಾಸೆಯಾಗಿ ನಿಂತ ಆಂಡ್ರೂಸ್, ಗೋಪಾಲಕೃಷ್ಣ ಗೋಖಲೆ, ರವೀಂದ್ರನಾಥ ಟ್ಯಾಗೋರ್, ಮಹಾತ್ಮ ಗಾಂಧಿ ಅವರ ಒಡನಾಟ ಬೆಳೆಸಿಕೊಂಡರು.

'ದೀನಬಂಧು' ಎಂದು ಕರೆಸಿಕೊಂಡ ಆಂಡ್ರೂಸ್, ಗಾಂಧೀಜಿಯವರೊಂದಿಗೆ ಅನೇಕ ಚಳವಳಿಗಳಲ್ಲಿ ಭಾಗವಹಿಸಿದರಲ್ಲದೆ, ಐತಿಹಾಸಿಕ 'ದುಂಡು ಮೇಜಿನ ಪರಿಷತ್'ನಲ್ಲಿ ಬಾಪು ಅವರೊಂದಿಗಿದ್ದು ಭಾರತದ, ಭಾರತೀಯರ ಸಂಕಷ್ಟಗಳಿಗೆ ಸ್ಪಂದಿಸಿದರು.

ಥಿಯೋಸಾಫಿಕಲ್ ತತ್ವಗಳನ್ನು ಪ್ರಚಾರ ಮಾಡಲು ಭಾರತಕ್ಕೆ ಆಗಮಿಸಿದ ಆನಿ ಬೆಸಂಟ್ ಭಾರತೀಯರ ಸ್ಥಿತಿ ಕಂಡು ಮರುಗಿ ಹಲವು ವಿದ್ಯಾಸಂಸ್ಥೆಗಳನ್ನು, ಸಾಮಾಜಿಕ ಸಂಘಟನೆಗಳನ್ನು ಸ್ಥಾಪಿಸಿದರಲ್ಲದೆ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ನೀಡಬೇಕೆಂದು ಒತ್ತಾಯಿಸಿದ ಬ್ರಿಟೀಷರ ಪೈಕಿ ಮುಂಚೂಣಿಯಲ್ಲಿ ನಿಂತರು. ಲಂಡನ್‌ನಲ್ಲಿ ಬ್ರಿಟೀಷ್ ಸಂಸತ್ ಸಮಿತಿಯ ಮುಂದೆ ಎಲ್ಲಾ ಕಾಲಕ್ಕೂ ಭಾರತದ ಸಂವಿಧಾನವನ್ನು ಬ್ರಿಟೀಷ್ ಸರ್ಕಾರ ರಚಿಸಲು ಸಾಧ್ಯವಿಲ್ಲವೆಂದು ಘೋಷಿಸಿದ ದಿಟ್ಟ ಮಹಿಳೆ ಆನಿ ಬೆಸೆಂಟ್.

ಭಾರತದ ಆಧ್ಯಾತ್ಮ ಶ್ರೀಮಂತಿಕೆಗೆ ಮಾರುಹೋಗಿ ಸ್ವಾಮಿ ವಿವೇಕಾನಂದ ಅನುಯಾಯಿಯಾಗಿ, ಅವರಿಂದಲೇ 'ಸಹೋದರಿ ನಿವೇದಿತಾ' ಎಂದು ಕರೆಸಿಕೊಂಡ ಮಾರ್ಗರೇಟ್ ನೋಬೆಲ್ ಭಾರತೀಯರ ಪರವಾಗಿ ದನಿ ಎತ್ತಿದ ಇನ್ನೊಬ್ಬ ಬ್ರಿಟೀಷ್ ಮಹಿಳೆ.

ಕಾಂಗ್ರೆಸ್ ಸಮಾವೇಶಗಳಲ್ಲಿ ಭಾಗವಹಿಸಿ ತಮ್ಮ ಪ್ರಖರ ಮಾತುಗಾರಿಕೆಯಿಂದ ಭಾರತೀಯರಿಗೆ ಸ್ವಾತಂತ್ರ್ಯ ನೀಡಬೇಕೆಂದು ಒತ್ತಾಯಿಸಿದ ಸೋದರಿ ನಿವೇದಿತಾ ಸ್ವಾತಂತ್ರ್ಯದ ಮುಂಚೂಣಿಯಲ್ಲಿದ್ದ ಬಹುತೇಕ ಎಲ್ಲಾ ಮುಂದಾಳುಗಳ ಸಂಪರ್ಕದಲ್ಲಿದ್ದುಕೊಂಡು ಭಾಷಣ ಬರವಣಿಗೆ ಮೂಲಕ ಹೋರಾಡಿದರು.

ಹೀಗೆ ಬ್ರಿಟೀಷರಿಂದ ಭಾರತೀಯರ ಬಿಡುಗಡೆಗಾಗಿ ಶ್ರಮಿಸಿದ ಇಂಥ ವಿದೇಶೀಯರಿಗೆ ನಾವು ಸದಾ ಋಣಿಗಳಾಗಿರುವುದೇ ಅವರಿಗೆ ಸಲ್ಲಿಸುವ ಗೌರವವಾಗಿದೆ.

### ಒಗಟು ಬಿಡಿಸಿ

ಬೆರಳು ತೋರಿದರೆ ಹಸ್ತ ನುಂಗುವೆನು-ರಾಜಕಾರಣಿ ನಾನಲ್ಲ.
ಬಣ್ಣದ ಬೆಡಗು ತೋರುವೆನು-ಕಾಮನ ಬಿಲ್ಲು ನಾನಲ್ಲ.
ಗಲ್‌ಗಲ್ ನಾದವ ಮಾಡುವೆನು-ನಾಟ್ಯರಾಣಿಯೂ ನಾನಲ್ಲ.
ಶುಭದ ಲಾಂಛನವಾಗಿಹೆನು-ತಳಿರು ತೋರಣ ನಾನಲ್ಲ.
ನಾನಾರೆಂದು ಹೇಳುವಿರಾದರೆ ಜಾಣರು ನೀವಾಗುವಿರಿ?

# ಸಾಮಾಜಿಕ ಬದಲಾವಣೆಯಲ್ಲಿ ಮಹಿಳಾ ಪಾತ್ರ



ಇತಿಹಾಸದುದ್ದಕ್ಕೂ ಮಾನವನ ಜೀವನವು ಪ್ರಚಂಡ ಬದಲಾವಣೆ ಕಂಡಿದೆ. ಮಾನವನ ಅವಿಶ್ರಾಂತ ದುಡಿಮೆ ಮತ್ತು ಕ್ರಿಯಾಶೀಲ ಗುಣ ಸಾಮಾಜಿಕ ಪರಿವರ್ತನೆಗೆ ನಾಂದಿಯಾಗಿದೆ. ಇದರಿಂದ ಪ್ರಪಂಚವು ತ್ವರಿತವಾಗಿ ಬದಲಾಗುತ್ತಿದೆ. ಪರಿವರ್ತನೆಯು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಜೈವಿಕ ಮತ್ತು ಪ್ರಾಕೃತಿಕ ಈ ಎಲ್ಲಾ ಕ್ಷೇತ್ರಗಳಲ್ಲೂ ಆಗಿದೆ. ಜನರ ಕಲೆ, ಭಾಷೆ, ತಾಂತ್ರಿಕ ಕುಶಲತೆ, ಜೀವನಾದರ್ಶ, ಮೌಲ್ಯ, ಸಂಬಂಧ, ಜೀವನಮಟ್ಟ, ಆರ್ಥಿಕ ಸ್ಥಿತಿಗತಿ, ಜನಸಂಖ್ಯೆಯ ಗಾತ್ರಗಳಲ್ಲಿನ ಬದಲಾವಣೆಯೇ ಸಾಮಾಜಿಕ ಬದಲಾವಣೆಯಾಗಿದೆ.

ನಿಸರ್ಗ ಮತ್ತು ಅವಶ್ಯಕತೆ ಸಾಮಾಜಿಕ ಬದಲಾವಣೆಗೆ ಕಾರಣವಾದರೆ, ಕೈಗಾರಿಕಾ ಕ್ರಾಂತಿ ಕೌಟುಂಬಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನೇ ಪುನರ್ನಿರ್ಮಾಣ ಮಾಡಿದೆ. ನಗರೀಕರಣ, ಆಧುನೀಕರಣ, ಕಂಪ್ಯೂಟರೀಕರಣ ಮತ್ತು ಜಾಗತೀಕರಣಗಳಿಂದ ಮಾನವ ಸಮಾಜ ನವನವೀನವಾಗಿದೆ. ಯಾಂತ್ರಿಕತೆಯ ಉತ್ತುಂಗ ಶಿಖರವೇರಿದೆ. ಬದಲಾಗುತ್ತಿರುವ ಸಾಂಸ್ಕೃತಿಕ ಅಂಶಗಳು ಸಮಾಜದ ಆಂತರಿಕ ಸ್ವರೂಪವನ್ನು ಪರಿವರ್ತಿಸುತ್ತಿವೆ.

ಚಲನಶೀಲ ಸಮಾಜದಲ್ಲಿ ಸಾಮಾಜಿಕ ಬದಲಾವಣೆ ಅನಿವಾರ್ಯ ಪ್ರಕ್ರಿಯೆ. ಸಾಮಾಜಿಕ ಬದಲಾವಣೆ ಪ್ರಗತಿಯತ್ತ ಮತ್ತು ವಿಗತಿಯತ್ತಲೂ ಸಾಗಬಹುದು. ಭೂಕಂಪ, ಬರಗಾಲ ಮುಂತಾದ ನೈಸರ್ಗಿಕ ಘಟನೆಗಳು ಸಾವು-ನೋವು, ಆಸ್ತಿ ನಷ್ಟವನ್ನು ಉಂಟುಮಾಡಿದರೆ, ಮಾನವ ನಿರ್ಮಿತ ಘಟನೆಗಳಾದ ಯುದ್ಧ, ಭಯೋತ್ಪಾದನೆ, ಪರಿಸರ ನಾಶ ಮಾನವ ಸಮಾಜದ ನೆಮ್ಮದಿ ಬಾಳ್ವೆಗೆ ಅಡಚಣೆಯಾಗಿವೆ. ವಿಜ್ಞಾನ ತಂತ್ರಗಾರಿಕೆ, ಸಂಶೋಧನೆ, ಸಮಾಜ ಸುಧಾರಣಾ ಕ್ರಮಗಳು ಪ್ರಗತಿಗೆ ಪೂರಕವಾಗಿವೆ. ಸಮಾಜದಲ್ಲಿನ ಅಸಮಾನತೆ, ಅನೀತಿ, ಅನ್ಯಾಯ, ಅಧರ್ಮ, ಭ್ರಷ್ಟಾಚಾರ, ಮೋಸ, ವಂಚನೆ, ಅಪರಾಧ, ವೇಶ್ಯಾವೃತ್ತಿ ಮುಂತಾದವುಗಳಿಂದ ಜನಜೀವನ ದುಸ್ತರವಾಗಿ ಮನುಕುಲ ವಿನಾಶದೆಡೆಗೆ ಸಾಗುತ್ತಿದೆ.



ಸಾಮಾಜಿಕ ಬದಲಾವಣೆಯಲ್ಲಿ ಪುರುಷ ಮತ್ತು ಮಹಿಳೆಯರ ಪಾತ್ರ ಸರಿಸಮಾನವಾದುದು. ಆದರೆ ಪುರುಷ ಪ್ರಧಾನ ಸಮಾಜ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನಿರಂತರವಾಗಿ ನಿರ್ಲಕ್ಷಿಸಿದೆ. ಪ್ರಪಂಚದ ಅರ್ಧದಷ್ಟು ಜನರು ಮಹಿಳೆಯರೇ ಆದರೂ ಅವರು ಪುರುಷರಿಗೆ ಸಮಾನರಾಗಿಲ್ಲದಿರುವುದು ಸಾಮಾಜಿಕ ದುರಂತವೇ ಸರಿ. ವಾಸ್ತವವಾಗಿ ಮಹಿಳೆ ದೈಹಿಕವಾಗಿ ಪುರುಷನಿಗೆ ಅಸಮಾನಳಾದರೆ ಮಾನಸಿಕವಾಗಿ ಗಟ್ಟಿಗಳು. ಕುಟುಂಬ ಮತ್ತು ಸಮಾಜದ ಪ್ರತಿಯೊಂದು ಚಟುವಟಿಕೆಗಳಲ್ಲಿ ಮಹಿಳೆಯರ ಸಹಕಾರ, ಪ್ರೋತ್ಸಾಹ ಮತ್ತು ಸಹಭಾಗಿತ್ವ ಅನಿವಾರ್ಯ ವಾಸ್ತವ. ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳಾ ಪಾತ್ರ ಎಷ್ಟು ಅಗಾಧವಾಗಿರುತ್ತದೋ ಅಷ್ಟೇ ಪ್ರಮಾಣದಲ್ಲಿ ಸಾಮಾಜಿಕ ಬದಲಾವಣೆಯಲ್ಲಿ ಮಹಿಳಾ ಜವಾಬ್ದಾರಿ ಪ್ರಧಾನವಾದುದು. ಇತಿಹಾಸದ ಉದ್ದಕ್ಕೂ ಮಹಿಳಾ ಪ್ರಗತಿಗೆ ಪುರುಷ ಪ್ರಧಾನ ಸಮಾಜ ಅಡೆ-ತಡೆ ಒಡ್ಡಿದರೂ ಸಮಾಜ ಸುಧಾರಣೆಯ ಮೂಲಕ ನಡೆದ ಸಾಮಾಜಿಕ ಕ್ರಾಂತಿಗಳಲ್ಲಿ ಮಹಿಳೆಯರು ಮುಂಚೂಣಿಯಲ್ಲಿರುವುದನ್ನು ಹಿಂದೆ-ಇಂದು-ಮುಂದೆಯೂ ನೋಡಬಹುದು.

ಆಧುನಿಕ ಮಹಿಳೆ ನೆಚ್ಚಿನ ಮಡದಿಯಾಗಿ, ಸೊಸೆಯಾಗಿ, ತಾಯಿಯಾಗಿ, ಮನೆಯ ಮೊದಲ ಗುರುವಾಗಿ, ಕಛೇರಿಯಲ್ಲಿ ಯಶಸ್ವಿ ನೌಕರಳಾಗಿ ತನ್ನ ಬಹುಮುಖ ಪ್ರತಿಭೆಯನ್ನು ಮೆರೆದಿದ್ದಾಳೆ. ಕುಟುಂಬದ ನೆಮ್ಮದಿಗೆ ಕಾರಣಕರ್ತಳಾಗಿ ಆರ್ಥಿಕತೆಯ ಆಧಾರ ಸ್ತಂಭವೂ ಆಗಿದ್ದಾಳೆ. ಸಣ್ಣ ಮತ್ತು ಸುಖೀ ಕುಟುಂಬದ ಕರ್ತೃವಾಗಿ ಜನಸಂಖ್ಯಾ ನಿಯಂತ್ರಣಕ್ಕೆ ಕೈ ಜೋಡಿಸಿದ್ದಾಳೆ. ಗ್ರಾಮೀಣ ಮಹಿಳೆ ಮನೆಯೊಳಗೆ ಮತ್ತು ಹೊರಗೆ ದುಡಿದು ಸಂಸಾರ ನೌಕೆಯನ್ನು ಸಾಗಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾಳೆ. ರೈತ ನಮ್ಮ ರಾಷ್ಟ್ರದ ಆರ್ಥಿಕತೆಯ ಬೆನ್ನೆಲುಬಾದರೆ, ಗ್ರಾಮೀಣ ಮಹಿಳೆ ರೈತನ ಬೆನ್ನೆಲುಬಾಗಿದ್ದಾಳೆ.

***(ರೂಪಾ)***



# ಸರ್ಕಾರದ ಕೆಲಸ ದೇವರ ಕೆಲಸ



ಈ ಶಿರೋನಾಮೆ ಕರ್ನಾಟಕ ಸರ್ಕಾರದ ಸಚಿವಾಲಯ ಅಂದರೆ ವಿಧಾನಸೌಧದ ಕಟ್ಟಡದ ಮುಂಭಾಗದ ಗೋಪುರದ ಕೆಳಗೆ ದಪ್ಪ ಅಕ್ಷರದಲ್ಲಿ ಬರೆಯಲಾಗಿದೆ. ನಿಜ ವಾಗಲೂ ಸರ್ಕಾರಿ ಕೆಲಸವೆಂದರೆ ದೇವರ ಕೆಲಸವೆಂದು ಕೆಲಸ ಮಾಡುವ ಸರ್ಕಾರಿ ನೌಕರರು ಅಲ್ಲೊಬ್ಬ ಇಲ್ಲೊಬ್ಬರಿದ್ದಾರೆ. ಎಲ್ಲಾ ಸರ್ಕಾರಿ ನೌಕರರು ಯಾಕೆ ಹಾಗಿರುವುದಿಲ್ಲವೆಂದರೆ ಕೆಲಸ ಮಾಡಬೇಕಾದಲ್ಲಿ ಇನ್‌ಫ್ಲುಯೆನ್ಸ್, ಮೌಖಿಕ ಸೂಚನೆ/ಆದೇಶ, ಸಂದರ್ಭಕ್ಕೆ ತಕ್ಕಂತೆ ಸರ್ಕಾರಿ ಆದೇಶವನ್ನು ಅಳವಡಿಸಿಕೊಳ್ಳುವಿಕೆ, ಒತ್ತಡ, ಮಕ್ಕಿ ಕಾ ಮಕ್ಕಿ, ಕಾಪಿ ಮಾಡುವಿಕೆ ಇತ್ಯಾದಿಗಳೇ ಕಾರಣ.

ಶ್ರೀಮತಿ ಸಿ. ಶಿಖಾರವರು ಮೂಲತಃ ತಮಿಳುನಾಡಿನವರಾಗಿದ್ದು ಐಎಎಸ್ ಪಡೆದು ಕರ್ನಾಟಕ ರಾಜ್ಯದಲ್ಲಿ ಐಎಎಸ್ ಅಧಿಕಾರಿಯಾಗಿ ವಿವಿಧ ಇಲಾಖೆಯ ಹುದ್ದೆಗಳಲ್ಲಿ ಕೆಲಸವನ್ನು ಮೇಲಿನ ಶಿರೋನಾಮೆಗೆ ಹೋಲುವಂತೆ ಕೆಲಸವನ್ನು ಮಾಡುವ ಮಹಿಳಾ ಅಧಿಕಾರಿ. ಈಗ ಸರ್ಕಾರಿ ನೌಕರಿ ಮಾಡುವುದು ಬಹಳ ಕಷ್ಟ. ಅದಕ್ಕೆ ಕಾರಣಗಳು ಹಲವಾರು. ಹೀಗಿದ್ದಾಗ್ಯೂ ಎಲ್ಲವನ್ನೂ ಮೆಟ್ಟಿನಿಂತು ನ್ಯಾಯಯುತವಾಗಿ ಧೈರ್ಯದಿಂದ ಹುದ್ದೆಯ ಜವಾಬ್ದಾರಿಯನ್ನು ಅರಿತು ಕೆಲಸ ಮಾಡುತ್ತಿರುವ ಸಿ. ಶಿಖಾರವರು ಜನಸಾಮಾನ್ಯರ ಮನೆ ಮಾತಾಗಿರುವುದು ಮೆಚ್ಚಬೇಕಾದ್ದೇ. ಕನ್ನಡ ಭಾಷೆಯನ್ನು ಬಲ್ಲವರು ಹಾಗೂ ಕನ್ನಡ ಭಾಷೆಗೆ ಮನ್ನಣೆ ನೀಡುವವರಾಗಿದ್ದಾರೆ.

ಸಿ. ಶಿಖಾರವರು ಈಗ ಪದವಿಪೂರ್ವ ಶಿಕ್ಷಣ ಮಂಡಳಿಯ ನಿರ್ದೇಶಕರಾಗಿದ್ದು, ಅವರಿಗೆ ಆ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಸ್ವತಂತ್ರವಾಗಿ ಬಿಡಬೇಕು. ಆಗ ನೋಡಿ ಅವರ ಕಾರ್ಯವೈಖರಿ ಹೇಗಿರುತ್ತದೆಂದು. ಹೆಣ್ಣು ಯಾವ ಕೆಲವನ್ನಾದರೂ ಮಾಡಬಲ್ಲಳು ಎಂಬುದಕ್ಕೆ ಇವರು ಜೀವಂತ ಪುಷ್ಟಿ ನೀಡುವ ಮಹಿಳೆ. ಇವರ ಮನಸ್ಸು, ಧೈರ್ಯ, ನೇರನುಡಿ, ಸೇವಾ ಮನೋಭಾವ, ಮುಂದಾಲೋಚನೆ, ಶಿಸ್ತು, ಸಮಯಪ್ರಜ್ಞೆಗಳಂತೆಯೇ ಕಾರ್ಯ ನಿರ್ವಹಿಸಿ ಎಂದೆಂದೂ ಉನ್ನತ ಮಟ್ಟದಲ್ಲೇ ಇರಲಿ ಎಂದು ಮಹಿಳಾ ವಿಶೇಷ ಬಳಗ ಅವರ ಜೊತೆಯಲ್ಲಿ ಸದಾ ಕಾಲ ಇರಲು ಬದ್ಧವಾಗಿ ಎಂದು ಶುಭ ಹಾರೈಸಿದೆ.





## ಆಗಸ್ಟ್ 15



ಇದೋ ಬಂದಿತು ಮಹಾಸುದಿನ
ಭಾರತೀಯರ ಸಂತಸದ ದಿನ
ರಾಷ್ಟ್ರನಾಯಕರಸ್ಮರಣೀಯ ದಿನ.
ಸಂಭ್ರಮದ ಸ್ವಾತಂತ್ರ್ಯ ದಿನ
ಹೋರಾಟದ ಪ್ರತಿಫಲದ ದಿನ
ರಾಷ್ಟ್ರಧ್ವಜ ಮುಗಿಲೆತ್ತರಕ್ಕೇರಿದ ದಿನ
ಮರೆಯಲಾರದ ಸ್ವಾತಂತ್ರ್ಯ ದಿನ
ಬಾಳ ಜ್ಯೋತಿಯನ್ನು ಬೆಳಗಿಸುವ ದಿನ
ಅಮರವಾದ ಸ್ವಾತಂತ್ರ್ಯ ದಿನ
ಅದುವೆ ಆಗಸ್ಟ್ 15ರ ದಿನ.

ಸುಚಿತ್ರಾ

★ ★ ★

## ವಿದ್ಯಾರ್ಥಿಗಳಿಗೆ ಹಿತನುಡಿಗಳು

ಮೂವರು ಮಿತ್ರರು – ಪರಿಸರ, ಪುಸ್ತಕ, ಉಪಾಧ್ಯಾಯರು
ಮೂವರು ಶತ್ರುಗಳು – ಆಲಸ್ಯ, ಅಸೂಯೆ, ಅಹಂಕಾರ
ಮೂರು ಲಕ್ಷಣಗಳು – ಶಿಸ್ತು, ಏಕಾಗ್ರತೆ, ಪರಿಶ್ರಮ
ಮೂರು ಅಂಶಗಳು – ಸತ್ಯ, ನಂಬಿಕೆ, ಪ್ರಾಮಾಣಿಕತೆ
ಮೂರು ಸಂಪತ್ತುಗಳು – ವಿದ್ಯೆ, ಸ್ನೇಹ, ಜ್ಞಾನ
ಮೂವರು ರಕ್ಷಕರು – ಬುದ್ಧಿ, ಜಾಣ್ಮೆ, ಧೈರ್ಯ

ವತ್ಸಲಾ



# ಕಳಲೆ-ಧಾರ್ಮಿಕ ಕ್ಷೇತ್ರದ ಪರಿಚಯ

**ಕೆ.ಆರ್. ದೇವರಾಜನ್**



ವೇಣುಪುರಿ ಎಂದು ಪ್ರಸಿದ್ಧಿ ಪಡೆದಿದ್ದ ಈಗಿನ ಕಳಲೆ ಗ್ರಾಮವು ಮೈಸೂರು ಜಿಲ್ಲೆಯ ನಂಜನಗೂಡಿನಿಂದ ಗುಂಡ್ಲುಪೇಟೆಗೆ ಹೋಗುವ ಮಾರ್ಗಮಧ್ಯದಲ್ಲಿ 6 ಕಿ.ಮೀ.ದೂರದಲ್ಲಿದೆ. ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಕಂಗೊಳಿಸುವ ಈ ಕ್ಷೇತ್ರವು ಪೌರಾಣಿಕವಾಗಿ ''ವೇಣುಪುರಿ, ಕಪಿಲಾಶ್ರಮ ಮತ್ತು ತುಳಸಿ ಕಾನನ'' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪ್ರಕೃತಿಯ ಸುಂದರ ಸೊಬಗಿನ ಪ್ರಶಾಂತ ಹಿನ್ನೆಲೆಯಲ್ಲಿ ಆಕರ್ಷಕವಾಗಿ ರಾರಾಜಿಸುತ್ತಿರುವ ಲಕ್ಷ್ಮೀಕಾಂತನ ನೆಲೆ 'ಕಳಲೆ' ಪ್ರತಿಯೋರ್ವ ಆಸ್ತಿಕನೂ ಒಮ್ಮೆ ನೋಡಲೇಬೇಕಾದ ರಮ್ಯಸ್ಥಳ.

## ಕಪಿಲಾಶ್ರಮ ವೈಭವ

ವೈಶಂಪಾಯನ ಮಹರ್ಷಿಯು ಜನಮೇಜಯನಿಗೆ, ನಾರದರಿಂದ ತಾವು ತಿಳಿದ ತ್ರೇತಾಯುಗದಲ್ಲಿ ಅತ್ರಿ ಮಹರ್ಷಿಗಳು ಶ್ರೀಯಃಪತಿಯ ಭಕ್ತರಿಗೆ ಒಲಿದು ಇಷ್ಟಾರ್ಥವನ್ನು ಬಹಳ ಶೀಘ್ರವಾಗಿ ಎಲ್ಲಿ ದಯಪಾಲಿಸಬಹುದೋ ಅಂತಹ ಪ್ರದೇಶವನ್ನು ತಿಳಿಯಲಿಚ್ಛಿಸುವವರಾದರು. ಆಗ ಬ್ರಹ್ಮದೇವನು, ಹಿಂದೆ ವೇದೋದ್ಧರಣ ಕಾಲದಲ್ಲಿ ತನ್ನ ತಪಸ್ಸಿಗೆ ಸಿದ್ಧಿಯುಂಟಾಗಿ ಅತ್ಯಲ್ಪ ಕಾಲದಲ್ಲೇ ಲಕ್ಷ್ಮೀವಲ್ಲಭನು ಒಲಿದು, ಪ್ರಸಿದ್ಧವಾದ ಕಪಿಲಾ ಕೌಂಡಿನ್ಯ ನದಿ ತೀರದಲ್ಲಿ ತುಳಸೀ ಕಾನನವೆಂದು ಪ್ರಸಿದ್ಧಿ ಪಡೆದ ಈ ವೈಷ್ಣವ ಕ್ಷೇತ್ರವನ್ನು ತೋರಿಸಿ ಪರಮಾತ್ಮನ ಪ್ರೀತಿಯನ್ನು ಸಾಧಿಸುವವನಾಗು ಎಂದು ಹೇಳಿದನು. ಕೂಡಲೇ ಅತ್ರಿ ಮಹರ್ಷಿಯು ಈ ಕ್ಷೇತ್ರಕ್ಕೆ ಬಂದು ಶ್ರೀಕಾಂತನನ್ನು ನೆನೆಯುತ್ತಾ ಏಕಾಗ್ರತೆಯಿಂದ ತಪಸ್ಸನ್ನಾಚರಿಸಿದನು. ಭಗವಂತನು ಮಹರ್ಷಿಗಳ ತಪಸ್ಸಿಗೆ ಪ್ರತ್ಯಕ್ಷನಾಗಿ ಅಭೀಪ್ಸಿತಾರ್ಥಗಳನ್ನು ಕೊಡುವುದಾಗಿ ಭರವಸೆಯಿತ್ತನು.

ಅತ್ರಿ ಮಹರ್ಷಿಗಳಿಗೆ ಶ್ರೀಯಃಪತಿಯನ್ನು ಬಿಟ್ಟಿರಲು ಮನಸ್ಸು ಒಪ್ಪಲಿಲ್ಲ. ತಾನೂ ಭಗವಂತನೊಂದಿಗೆ ಬರುವುದಾಗಿ ಕೇಳಿಕೊಂಡರು. ಲಕ್ಷ್ಮೀಪತಿಯು ಅತ್ರಿ ಮಹರ್ಷಿಗೆ ಪೂರ್ವದಲ್ಲಿ ಸೃಷ್ಟಿಕಾರ್ಯದಲ್ಲಿ ನೇಮಿತನಾದ ಬ್ರಹ್ಮನು ತನ್ನ ಅಗಲಿಕೆಯನ್ನು ತಾಳಲಾರದೆ ವಿಧ್ಯುಕ್ತವಾಗಿ ನಯನ ಮನೋಹರವಾದ ಆಚಾರಮೂರ್ತಿಯನ್ನು ಕಪಿಲಾಶ್ರಮದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದುದರಿಂದ ಸರ್ವಶ್ರೇಯಸ್ಸಾಧನಭೂತವಾದ ಆ ಕ್ಷೇತ್ರದಲ್ಲಿ ತಾನೂ ಅಲ್ಲೇ ನೆಲೆಸಿರುವುದರಿಂದ, ತನ್ನನ್ನು ಪೂಜಿಸುತ್ತಿರಬೇಕೆಂದೂ ಅಪ್ಪಣೆ ಮಾಡಿ ವೈಕುಂಠಕ್ಕೆ ತೆರಳಿದನು.

(ಮುಂದುವರೆಯುವುದು)



# ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಾಧೀಶೆಯಾಗಿ ಕನ್ನಡತಿ ಮಂಜುಳಾ ಚೆಲ್ಲೂರ್





ಮೈಸೂರು ನಗರದಲ್ಲಿರುವ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿದ್ದು ಬೆಂಗಳೂರು ಹೈಕೋರ್ಟಿಗೆ ವರ್ಗವಾಗಿ 2012ರಲ್ಲಿ ಕೇರಳ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ 2014ರಲ್ಲಿ ಕೋಲ್ಕತ್ತ ಹೈಕೋರ್ಟ್‌ನ ಪ್ರಥಮ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿದ್ದು ಈಗ ಬಾಂಬೆ ಹೈಕೋರ್ಟ್‌ಗೆ ಮುಖ್ಯ ನ್ಯಾಯಮೂರ್ತಿಯಾಗಿ ವರ್ಗಾವಣೆಗೊಂಡಿದ್ದಾರೆ. ಇವರು ನ್ಯಾಯಕ್ಕೆ ನ್ಯಾಯವನ್ನು ನೀಡುವ ಖಡಕ್ ಮಹಿಳೆಯಾಗಿದ್ದಾರೆ.

# ಕನ್ನಡ ಸಾಹಿತ್ಯದಲ್ಲಿ ಪ್ರಥಮ ಪ್ರಯೋಗ

ಕನ್ನಡ ಮಹಿಳಾ ಕಾವ್ಯ ಪರಂಪರೆಯನ್ನು ಕುರಿತಂತೆ ಪ್ರಮುಖ ಕವಯಿತ್ರಿಯರ ಕವಿತೆಗಳನ್ನು ಒಂದೆಡೆ ಸೇರಿಸಿ ಅವನ್ನು ವಿಮರ್ಶೆ, ಪರಿಚಯ ಹಾಗೂ ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿ **ಮಹಿಳಾ ಕಾವ್ಯ ಕಾರಣ** ಎಂಬ ಸಂಕಲವೊಂದನ್ನು ಸಿದ್ಧಪಡಿಸಿ ಮೈಸೂರಿನ ಸಂವಹನ ಪ್ರಕಾಶನ ಹೊರತಂದಿದೆ.

ಇದರಲ್ಲಿ ಪ್ರಮುಖ 75 ಲೇಖಕಿಯರನ್ನು ಆಯ್ಕೆ ಮಾಡಿಕೊಂಡು 2 ವರ್ಷಗಳ ಕಾಲ ಸತತ ಪ್ರಯತ್ನದಿಂದ ಈ ಕೃತಿ ಹೊರ ಬಂದಿದ್ದು, ಡಾ. ಎಂ.ಎಸ್. ವೇದಾ ಅವರು ಸಂಪಾದಕಿಯಾಗಿದ್ದಾರೆ.

## ಜಯಲಕ್ಷ್ಮಿಗೆ ಪಿಎಚ್‌ಡಿ

ಮೈಸೂರು ವಿಶ್ವವಿದ್ಯಾನಿಲಯವು ಸಂಸ್ಕೃತದ ಪ್ರಮುಖ ನಾಟಕಗಳಲ್ಲಿ ಚಿತ್ರಿತವಾಗಿರುವ ಹಾಸ್ಯ ಪ್ರಜ್ಞೆ ಒಂದು ವಿಮರ್ಶಾತ್ಮಕ ಅಧ್ಯಯನ ಮಹಾಪ್ರಬಂಧವನ್ನು ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ. ನಾರಾಯಣ ಭಟ್ಟ ಮಾಗದರ್ಶನದಲ್ಲಿ ಎಚ್. ಜಯಲಕ್ಷ್ಮಿ ಮಹಾಪ್ರಬಂಧವನ್ನು ಸಂಸ್ಕೃತ ಅಧ್ಯಯನ ವಿಭಾಗದಲ್ಲಿ ಮಂಡಿಸಿರುತ್ತಾರೆ.

## ನಮಿತಾಗೆ ಪಿಎಚ್‌ಡಿ

ಡಾ. ಪ್ರದೀಪ್ ಸಿಂಗ್ ನೇಗಿ ಅವರ ಮಾರ್ಗದರ್ಶನದಲ್ಲಿ ನಮಿತಾ ಬಯೋಟೆಕ್ನಾಲಜಿ ವಿಷಯದಲ್ಲಿ ಮಹಾಪ್ರಬಂಧವನ್ನು ಮಂಡಿಸಿದ್ದಾರೆ. ಈ ಪ್ರಬಂಧ **ಬಯೋಟೆಕ್ನಾಲಜಿಕಲ್ ಅಪ್ರೋಚಸ್ ಫಾರ್ ದಿ ಎನಾನ್ಸ್‌ಮೆಂಟ್ ಆಫ್ ಬಿ-ಕಾರೋಟಿನ್ ಇನ್ ಟೊಮೊಟೋ ಫ್ರೂಟ್ಸ್ ಅಂಡ್ ಇಟ್ಸ್ ಯೂಸ್ ಇನ್ ಪ್ರಿಪರೇಷನ್ ಆಫ್ ಪ್ರೋಸೆಸ್ಡ್ ಪ್ರಾಡಕ್ಟ್ಸ್**. ಇದನ್ನು ಮೈಸೂರು ವಿ.ವಿ. ಪಿಎಚ್‌ಡಿ ಪದವಿ ನೀಡಿದೆ.

## ಸುಷ್ಮಾಗೆ ಪಿಎಚ್‌ಡಿ

ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ ವಿಷಯದಲ್ಲಿ ಸುಷ್ಮಾ ಬಿ.ವಿ. ಅವರು **ನ್ಯೂಟ್ರಿಷನಲ್ ಸ್ಟಡೀಸ್ ಆನ್ ಚಿಲ್ಡ್ರನ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಬಿಹೇವಿಯರ್ ಪ್ರಾಬ್ಲಮ್** ಕುರಿತು ಡಾ. ಬೈರುನ್ನೀಸಾ ಬೇಗಂ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿ.ವಿ.ಯು ಪಿಎಚ್.ಡಿ. ಪದವಿ ನೀಡಿದೆ.

**ಮಹಿಳೆಯರಿಗೆ ಈ ಪತ್ರಿಕೆ ಆಶಾಕಿರಣವಾಗಿ ಮೂಡಿಬಂದು ಸಂತೋಷವನ್ನುಂಟು ಮಾಡಲಿ. ಮಹಿಳಾ ವಿಶೇಷ ತಿಂಗಳ ಪತ್ರಿಕೆಯ ಮೊದಲನೇ ಸಂಚಿಕೆಗೆ ಶುಭಾಶಯಗಳು.**

**ಅಮ್ಮ**

**ಕಮ್ಯೂನಿಕೇಷನ್ ಅಂಡ್ ಸ್ಟೇಷನರೀಸ್**
**ನಂದಿನಿ ಹಾಲಿನ ಕೇಂದ್ರ**
**ಪೇಯಿಂಗ್ ಗೆಸ್ಟ್ ಹೌಸ್**
**(ಮಹಿಳೆಯರಿಗೆ ಮಾತ್ರ)**

ಎಚ್.ಎಸ್. ಸತೀಶ್ ಕುಮಾರ್
93422-41452, 90363-29835
ಎಚ್.ಎಸ್. ಸಂಗಮೇಶ
98454-06826, 98866-77041



# ಭ್ರಷ್ಟಾಚಾರವನ್ನು ತಡೆಗಟ್ಟುವಲ್ಲಿ ಯುವಜನತೆಯ ಪಾತ್ರ

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಯುವಶಕ್ತಿ ಈ ದೇಶದ ಶಕ್ತಿ. ಯುವಕ-ಯುವತಿಯರೇ ಈ ದೇಶದ ಮುಖ್ಯ ಬೆನ್ನೆಲುಬು.

ಇತ್ತೀಚೆಗೆ ಭ್ರಷ್ಟಾಚಾರ ಎಂಬ ಪಿಡುಗು ನಮ್ಮ ಸಮಾಜವನ್ನು ಹಾಳುಗೆಡವುತ್ತಿದೆ. ಭ್ರಷ್ಟಾಚಾರ ಎಂದರೆ ಏನು ಎಂಬುದನ್ನು ಇಂದಿನ ಪೀಳಿಗೆಗೆ ತಿಳಿಸಬೇಕಾದ ಅಗತ್ಯವೇನೂ ಇಲ್ಲ. ಏಕೆಂದರೆ ಭ್ರಷ್ಟಾಚಾರ ಎಂಬುದನ್ನು ಸುಲಭವಾಗಿ ಹೇಳುವುದಾದರೆ ಲಂಚ ಸ್ವೀಕರಿಸುವುದು ಅಥವಾ ಪಡೆಯುವುದು ಎಂದು ಹೇಳಬಹುದು. ಇದೊಂದು ಹಗಲು ದರೋಡೆಯಾಗಿದೆ. ನಮ್ಮ ದೇಶದ ಕಾನೂನು ವ್ಯವಸ್ಥೆ ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸಿದ್ದರೂ ಆ ಸಂಸ್ಥೆ ಮಾತ್ರ ಇದರ ಬಗ್ಗೆ ಕಾಳಜಿ ವಹಿಸಿದರೆ ನಮ್ಮ ಕಡೆಯಿಂದ ಏನಾದರೂ ಈ ರಾಷ್ಟ್ರಕ್ಕೆ ಒಳ್ಳೆಯದನ್ನು ಮಾಡಬೇಕೆನಿಸಿದ್ದಲ್ಲಿ ಭ್ರಷ್ಟಾಚಾರವನ್ನು ವಿರೋಧಿಸುವಲ್ಲಿ, ತಡೆಯುವಲ್ಲಿ ನಾವು ಮುನ್ನುಗ್ಗೋಣ.

ಆಧುನಿಕ ಪ್ರಪಂಚ ಭಯೋತ್ಪಾದನೆ, ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ ಮುಂತಾದ ಹೀನ ಹಿಂಸಾತ್ಮಕ ಕೃತ್ಯಗಳಿಂದ ಜರ್ಜರಿತವಾಗಿದೆ. ಇದೆಲ್ಲವೂ ನಮ್ಮ ಕಣ್ಣ ಮುಂದೆ ನಡೆಯುತ್ತಿದ್ದರೂ ನಾವು ಮುಗ್ಧರಂತೆ ವರ್ತಿಸುತ್ತಿದ್ದೇವೆ. ಜನಸೇವೆ ಮಾಡಬೇಕಾದ ಜನನಾಯಕರೇ ಮುಗ್ಧ ಜನರ ಹಣವನ್ನು ದುಷ್ಟಾಚಾರದ ಮೂಲಕ ಲೂಟಿ ಮಾಡುತ್ತಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿರುವಾಗ ನಮ್ಮಲ್ಲಿ ಒಂದೊಂದೇ ಉದ್ಭವಿಸುತ್ತದೆ. ಅದೇನೆಂದರೆ ಮನುಷ್ಯ ಏಕೆ ಇಷ್ಟೊಂದು ಸ್ವಾರ್ಥಿಯಾಗುತ್ತಿದ್ದಾನೆ. ಇದಕ್ಕೆಲ್ಲಾ ಏನು ಕಾರಣ? ಈ ಭ್ರಷ್ಟಾಚಾರವನ್ನು ಅಳಿಸಲು ಪರಿಹಾರಗಳೇ ಇಲ್ಲವೇ? ಏಕೆ ನಾವೆಲ್ಲರೂ ಮೂರ್ಖರಂತೆ ವರ್ತಿಸುತ್ತಿದ್ದೇವೆ?

ಎಲ್ಲಿ ಆತ್ಮೀಯತೆ ಎಂಬ ಭಾವ ಪರಸ್ಪರ ನಮ್ಮಲ್ಲಿ ಇರುವುದಿಲ್ಲವೋ ಆಗ ಇಂತಹ ಭ್ರಷ್ಟಾಚಾರ, ಲಂಚ ಪ್ರಕರಣಗಳು ಹುಟ್ಟಿಕೊಳ್ಳುತ್ತವೆ. ಮನುಷ್ಯನಿಗೆ ಆಸೆ, ಆಕಾಂಕ್ಷೆಗಳು ಇರುವುದು. ಎಲ್ಲಿಯ ಬಂಧುತ್ವ ಬೆಳೆಯುವುದಿಲ್ಲವೋ, ಮಾನವೀಯತೆ, ಮನುಷ್ಯತ್ವಗಳನ್ನು ಮರೆತು ಮನುಷ್ಯ ಕ್ರೂರ ಮೃಗದಂತೆ ವರ್ತಿಸುತ್ತಾನೋ ಅಲ್ಲಿಯ ತನಕ ಇಂತಹ ಭ್ರಷ್ಟಾಚಾರದ ಪ್ರಕರಣಗಳು ತಾಂಡವವಾಡುತ್ತಿದೆ.

ಆದ್ದರಿಂದ ಇಂತಹ ಪ್ರಕರಣಗಳು ನಮಗೆ ಕಾಣಸಿಕ್ಕರೆ ತಕ್ಷಣ ಸಂಬಂಧಪಟ್ಟ ಇಲಾಖೆಗೆ ದೂರು ಸಲ್ಲಿಸೋಣ. ಹಾಗೆಯೇ ಇಂತಹ ಅನೀತಿಯನ್ನು ದುಷ್ಟಾಚಾರಗಳನ್ನು ಬೇರುಸಹಿತ ಕಿತ್ತೆಸೆಯಲು ಮುಂದಾಗೋಣ. ಯುವಶಕ್ತಿಗಳಾದ ನಾವುಗಳು ಇದರ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವುದರ ಜೊತೆಗೆ ಸ್ವತಃ ಮುನ್ನುಗ್ಗಿ ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ತೋರಿಸೋಣ.

ನಮ್ರತಾ

# ವಧುಪರೀಕ್ಷೆ

ಸಂಜೀವರಾಯರು ಮತ್ತು ಆನಂದಮೂರ್ತಿಗಳು ಬಾಲ್ಯ ಸ್ನೇಹಿತರು. ಅವರದು ಒಳ್ಳೆಯ ಆತ್ಮೀಯ ಸ್ನೇಹ. ಅವರು ಸ್ನೇಹವನ್ನು ಸಂಬಂಧವಾಗಿ ಬೆಳೆಸಲು ನಿರ್ಧರಿಸಿದ್ದರು.

ಸಂಜೀವರಾಯರಿಗೆ ಇಬ್ಬರು ಮಕ್ಕಳಿದ್ದರು. ಮಗಳಿಗೆ ಮದುವೆ ಮಾಡಿದ್ದರು. ಮಗ ವಿವೇಕ. ಬಿ.ಎಸ್ಸಿ., ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೆರಿಕಾಕ್ಕೆ ಹೋಗಿದ್ದ.

ಆನಂದಮೂರ್ತಿಗಳಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಮೊದಲನೆ ಮಗಳು ದೀಪಾ 2ನೇ ಪಿಯುಸಿ ಮುಗಿಸಿ ಮನೆಯಲ್ಲಿದ್ದಳು. 2ನೇ ಮಗಳು ಚಿಕ್ಕವಳಾಗಿದ್ದಳು. ಸಂಜೀವರಾಯರು ತಮ್ಮ ಮಗ ವಿವೇಕನನ್ನು ಆನಂದಮೂರ್ತಿಗಳ ಮಗಳಿಗೆ ಕೊಟ್ಟು ಮದುವೆ ಮಾಡುವುದಾಗಿ ಮಾತು ಕೊಟ್ಟಿದ್ದರು.

ಒಂದು ದಿನ ಸಂಜೀವರಾಯರು, ಮೂರ್ತಿಗಳ ಮನೆಗೆ ಬಂದು ಮಾತಾಡುತ್ತಿರುವಾಗ ದೀಪಾ ಕಾಫಿ ತಂದಳು. ದೀಪಾಳನ್ನು ನೋಡಿದ ರಾಯರು ನನ್ನ ಮಗ ಓದು ಮುಗಿಸಿ ಭಾರತಕ್ಕೆ ಬರುತ್ತಿದ್ದಾನೆ. ಬಂದ ಕೂಡಲೇ ದೀಪಾ ಮತ್ತು ವಿವೇಕನ ಮದುವೆಯನ್ನು ಮುಗಿಸಬೇಕು ಎಂದರು. ವಿವೇಕ ಬಂದ ಮೇಲೆ ದೀಪಾಳನ್ನು ನೋಡಲು ಮನೆಗೆ ಬರುವುದಾಗಿ ಹೇಳಿದರು.

ವಿವೇಕ ಭಾರತಕ್ಕೆ ಬಂದಾಯಿಕು, ಅವನಿಗೆ ಹೆಣ್ಣನ್ನು ಶಾಸ್ತ್ರದ ಪ್ರಕಾರ ನೋಡುವುದು ಇಷ್ಟವಿರಲಿಲ್ಲ. ಅದಕ್ಕಾಗಿ ಒಂದು ಉಪಾಯ ಮಾಡಿದ.

ಆ ದಿನ ಸಂಜೀವರಾಯರು ಹೆಣ್ಣನ್ನು ನೋಡಲು ಮೂರ್ತಿಗಳ ಮನೆಗೆ ಬರುವುದಾಗಿ ಹೇಳಿದ್ದರಿಂದ ಎಲ್ಲಾ ಸಿದ್ಧತೆಗಾಗಿ ಮೂರ್ತಿಗಳು ವಸ್ತುಗಳನ್ನು ತರಲು ಪತ್ನಿಯೊಂದಿಗೆ





ಮಾರ್ಕೆಟಿಗೆ ಹೋದರು. ಮನೆಯಲ್ಲಿ ದೀಪಾ ಒಬ್ಬಳೇ ಇದ್ದಳು. ದೀಪಾ ವಿವೇಕನನ್ನು ಹಿಂದೆಂದೂ ನೋಡಿರಲಿಲ್ಲ.

ಆ ದಿನ ಮಧ್ಯಾಹ್ನ ಯಾರೋ ಮೂರ್ತಿಗಳ ಮನೆಗೆ ಬಂದು ಕಾಲಿಂಗ್ ಬೆಲ್ ಮಾಡಿದರು. ದೀಪಾ ಎಂದಿನಂತೆ ನೈಟಿಯಲ್ಲಿ ಕೆಲಸ ಮಾಡುತ್ತಿರುತ್ತಾಳೆ. ತಕ್ಷಣವೇ ದೀಪಾ 'ಯಾರು?' ಎಂದು ಬಾಗಿಲು ತೆಗೆಯುತ್ತಾಳೆ. ಬಾಗಿಲಲ್ಲಿ ಒಬ್ಬ ನಡುವಯಸ್ಸಿನ ಯುವಕ ನಿಂತಿರುತ್ತಾನೆ. ದೀಪಾ ಅವನನ್ನು 'ನಿಮಗೆ ಯಾರು ಬೇಕು?' ಎಂದು ಕೇಳುತ್ತಾಳೆ. ಆ ಯುವಕ ತಾನು ವಿವೇಕನ ಫ್ರೆಂಡ್ ಕಿರಣ್ ಎಂದು ಹೇಳಿ 'ವಿವೇಕ ನಿಮ್ಮನ್ನು ನೋಡಲು ನಾಳೆ ಬರುವುದಿಲ್ಲ. ಕೆಲಸದ ಮೇಲೆ ಬಾಂಬೆಗೆ ಹೋಗಿದ್ದಾನೆ ಎಂದು ಹೇಳಲು ತಿಳಿಸಿದ' ಎಂದು ಹೇಳಿ ವಿವೇಕ ಕೊಟ್ಟ ಒಂದು ಪತ್ರವನ್ನು ಕೊಟ್ಟು ಹುಸಿನಗೆಯಿಂದ ಹೊರಟುಹೋಗುತ್ತಾನೆ.

ಆ ಯುವಕ ಹೋದ ನಂತರ ದೀಪಾ ಬಾಗಿಲು ಹಾಕಿ ಆ ಪತ್ರವನ್ನು ಮುದುರಿ ಎಸೆದು ಕೂತು ಅಳುತ್ತಾಳೆ. ತನಗಾದ ಬೇಸರವನ್ನು ದೀಪಾ ಕಣ್ಣೀರಿನ ಮೂಲಕ ತೋರುತ್ತಾಳೆ. ದೀಪಾ ಅಳುತ್ತಾ ಕುಳಿತಿರುವಾಗ ಅವಳ ತಂದೆ ತಾಯಿಗಳು ಮಾರ್ಕೆಟಿನಿಂದ ಬರುತ್ತಾರೆ. ಅಳುತ್ತಿದ್ದ ದೀಪಾಳನ್ನು ನೋಡಿ ಅವರು ಕಾರಣವೇನೆಂದು ಕೇಳಿದಾಗ ದೀಪಾ ನಡೆದ ಘಟನೆಯನ್ನು ವಿವರಿಸುತ್ತಾಳೆ. ಮೂರ್ತಿಗಳಿಗೆ ಕೆಂಡದಂತ ಕೋಪ ಬರುತ್ತದೆ. ತಮಗೆ ಈ ರೀತಿ ಅವಮಾನ ಮಾಡಿದ ಸಂಜೀವರಾಯರ ಮನೆಗೆ ಹೋಗಿ ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ.

ಆಗ ಸಂಜೀವರಾಯರು ಮೂರ್ತಿಗಳಿಗೆ ಸಮಾಧಾನ ಮಾಡಿ ನಿಜಾಂಶವನ್ನು ಹೇಳುತ್ತಾರೆ. ಅದೇನೆಂದರೆ ತಮ್ಮ ಮಗ ವಿವೇಕ ದೀಪಾಳನ್ನು ನೋಡಲು ಮಧ್ಯಾಹ್ನ ಬಂದಿದ್ದ. ಅದು ಕಿರಣ್ ಎಂಬ ಹೆಸರಿನಲ್ಲಿ. ಏಕೆಂದರೆ ಅವನಿಗೆ ಸಂಪ್ರದಾಯದಂತೆ ಹೆಣ್ಣು ನೋಡುವ ಪದ್ಧತಿ ಇಷ್ಟವಿಲ್ಲದೆ ಹೀಗೊಂದು ಉಪಾಯ ಮಾಡಿದ ಎಂದು ನಡೆದ ನಿಜಾಂಶವನ್ನು ಹೇಳುತ್ತಾರೆ. ಈ ವಿಷಯ ಕೇಳಿದ ಮೂರ್ತಿಗಳಿಗೆ ಸಂತೋಷವಾಗುತ್ತದೆ. ಮೂರ್ತಿಗಳು ಮನೆಗೆ ಬಂದು ಈ ವಿಷಯವನ್ನು ತಿಳಿಸುತ್ತಾರೆ.

ಈ ವಿಷಯ ಕೇಳಿದ ದೀಪಾ ಖುಷಿಪಡುತ್ತಾಳೆ. ಕಿರಣ್ ಕೊಟ್ಟ ಕಾಗದವನ್ನು ಮುದುರಿ ಬಿಸಾಡಿದ. ದೀಪಾ ಅದನ್ನು ಹುಡುಕಿ ತೆರೆದು ಓದಿದಾಗ ಅದರಲ್ಲಿ ಹೀಗಿತ್ತು:

ಪ್ರೀತಿಯ ದೀಪಾರವರಿಗೆ,

ನನಗೆ ನಿಮ್ಮನ್ನು ನೋಡಲು ಆಸೆ ಇತ್ತು, ಆದರೆ ಮದುವೆ ಹೆಣ್ಣಿನ ರೂಪದಲ್ಲಿ ಅಲ್ಲ, ಒಂದು ಸಾಮಾನ್ಯ ಹೆಣ್ಣಿನ ರೂಪದಲ್ಲಿ. ನಾನು ಈ ರೀತಿ ಪರೀಕ್ಷಿಸಿದ್ದು ತಪ್ಪಾ ತಿಳಿಸಿ. ಈ ವಧುಪರೀಕ್ಷೆ ನಿಮಗೆ ಬೇಸರ ಉಂಟುಮಾಡಿದ್ದರೆ ದಯವಿಟ್ಟು ನನ್ನನ್ನು ಕ್ಷಮಿಸಿ.

ಇಂತು ನಿಮ್ಮ

ವಿವೇಕ್

## ಖಾಲಿ ಹುದ್ದೆಗಳ ಸಂಕ್ಷಿಪ್ತ ಮಾಹಿತಿ

## ಐಬಿಪಿಎಸ್-ಬ್ಯಾಂಕ್ ಕ್ಲರ್ಕ್ಸ್ ನೇಮಕಾತಿ

ಮುಂದಿನ ವರ್ಷದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು 19 ರಾಷ್ಟ್ರೀಕೃತ ಬ್ಯಾಂಕುಗಳು ನಡೆಸುವ ಕ್ಲರ್ಕ್ಸ್ ಹುದ್ದೆಗಳ ನೇಮಕಾತಿಗೆ ಅಗತ್ಯವಾದ ಸಾಮಾನ್ಯ ಲಿಖಿತ ಪರೀಕ್ಷೆ (CWE)ಯನ್ನು ನಡೆಸಲು ಐಬಿಪಿಎಸ್ ನಿರ್ಧರಿಸಿದ್ದು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು 12-9-2016ರಂದು ಕೊನೆಯ ದಿವಸ. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ www.ibps.in ನೋಡಿ.

## ಗುತ್ತಿಗೆ ಆಧಾರದ ಮೇಲೆ ನೇಮಕಾತಿ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಗುಪ್ತಚರ ವಿಭಾಗದ ತಾಂತ್ರಿಕ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಇಲಾಖೆಯ ಅಧಿಕೃತ ಈ-ಮೇಲ್ adgpis@ksp.gov.inಗೆ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು 21-9-2016 ಕೊನೆಯ ದಿವಸ.

## ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ ಸುಮಾರು 1350 ಹುದ್ದೆಗಳನ್ನು ಭರ್ತಿ ಮಾಡಲು ಹಣಕಾಸು ಇಲಾಖೆ ಅನುಮೋದನೆ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಆರಂಭಿಸಲು ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಉಮಾಶ್ರೀ ಯವರು ತಿಳಿಸಿದ್ದಾರೆ. ಶೀಘ್ರದಲ್ಲೇ ಪ್ರಕ್ರಿಯೆ ಆರಂಭಗೊಂಡು ಅರ್ಜಿ ಆಹ್ವಾನಿಸಲು ಹಾಗೂ ಭರ್ತಿ ಮಾಡುವ ಲಕ್ಷಣಗಳು ಕಾಣುತ್ತಿವೆ.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದ ವಾಲ್ಮೀಕಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ವಿಜಯನಗರ ನಾಯಕ ಸಂಘ ಅರ್ಜಿ ಆಹ್ವಾನಿಸಿದೆ. ಪ್ರಧಾನ ಕಾರ್ಯದರ್ಶಿ, ವಿಜಯನಗರ ನಾಯಕ ಸಂಘ, 1ನೇ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ಬೆಂಗಳೂರು-40 ಈ ವಿಳಾಸಕ್ಕೆ ಸೆಪ್ಟೆಂಬರ್ 30ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 99168-01042 ಅನ್ನು ಸಂಪರ್ಕಿಸಿ.

### ಒಗಟು ಬಿಡಿಸಿ

ಕಿತ್ತಿಟ್ಟರೆ ಕಾಣುವುದಿಲ್ಲ.
ನೆಟ್ಟರೆ ಚಿಗುರುವುದಿಲ್ಲ.
ಸುಟ್ಟರೆ ಬೂದಿಯಾಗುವುದಿಲ್ಲ.
ನಾನ್ಯಾರು ಹೇಳಿ?



## ರುದ್ರಾಕ್ಷಿಗಳು ಹಾಗೂ ಅದರ ಮಹಿಮೆ

ರುದ್ರಾಕ್ಷಿಗಳಲ್ಲಿ 1ರಿಂದ 21 ಮುಖಗಳಿರುವ ರುದ್ರಾಕ್ಷಿಗಳಿರುತ್ತವೆ ಎಂದು ಶಾಸ್ತ್ರಗಳಿಂದ ತಿಳಿದು ಬರುತ್ತದೆ. ದೇವೀ ಭಾಗವತ, ಶಿವಪುರಾಣ, ಸ್ಮೃತಿಗಳು ಹಾಗೂ ಉಪನಿಷತ್ತು ಗಳಲ್ಲಿ ರುದ್ರಾಕ್ಷಿಗಳು ಹೊಂದಿರುವ ಮುಖಗಳ ಆಧಾರದ ಮೇಲೆ ಅವುಗಳ ಮಹತ್ವವನ್ನು ತಿಳಿಯಬಹುದು.

**1. ಏಕಮುಖ ರುದ್ರಾಕ್ಷಿ:** ಒಂದು ಮುಖವಿರುವ ರುದ್ರಾಕ್ಷಿ 'ಏಕವಕ್ತ್ರಂ ತು ರುದ್ರಾಕ್ಷಂ ಪರತತ್ವ ಸ್ವರೂಪಕಂ' ಏಕಮುಖಿ ರುದ್ರಾಕ್ಷಿ. ದೇವೀ ಭಾಗವತವನ್ನು ಪರಮೇಶ್ವರನ ಸ್ವರೂಪವೆಂದೂ, ಪರಬ್ರಹ್ಮ ಸ್ವರೂಪದ್ದೆಂದೂ ಹೇಳುತ್ತಾರೆ. ಇಂತಹ ರುದ್ರಾಕ್ಷಿಗಳ ಮಾಲೆಯನ್ನು ಧರಿಸಿದವನು ಬ್ರಹ್ಮಹತ್ಯಾ ದೋಷದಿಂದ ಮುಕ್ತನಾಗುತ್ತಾನೆ. ಅವನು ಬಯಸಿದ್ದನ್ನೆಲ್ಲ ಪಡೆಯಬಲ್ಲನು. ಅವನಿಗೆ ಅತುಳೈಶ್ವರ್ಯ ಸಿರಿ-ಸಂಪತ್ತು ಪ್ರಾಪ್ತವಾಗುತ್ತದೆ. ಸಮಾಜದಲ್ಲಿ ಪ್ರತಿಷ್ಠಿತನಾಗುತ್ತಾನೆ. ಮನೋವಿಕಾಸವನ್ನು ಪಡೆದು ಪರಶಿವನ ತತ್ವಜ್ಞಾನ ಲಭಿಸಿ ಮಹಾಪುರುಷ ಎನಿಸಿಕೊಳ್ಳುವನು. ಉನ್ನತಾಧಿಕಾರ ದೊರೆಯುವುದು ಖಚಿತ.

ಆದರೆ ಏಕಮುಖಿ ರುದ್ರಾಕ್ಷಿ ಸಿಗುವುದು ದುರ್ಲಭ. ಹಾಗೆ ಸಿಕ್ಕಿದರೆ ಅದು ಅವನ ಪೂರ್ವ ಜನ್ಮದ ಸುಕೃತ ಫಲವೆಂದೇ ಹೇಳಬೇಕು. ಇದು ನೇಪಾಳದಲ್ಲಿರುವ ಮರಗಳಲ್ಲಿ ಎಂದೋ ಒಮ್ಮೆ ಒಂದು ರುದ್ರಾಕ್ಷಿ ದೊರೆಯುತ್ತದೆ ಎನ್ನುತ್ತಾರೆ ಬಲ್ಲವರು, ಪಂಡಿತರು.

ರುದ್ರಾಕ್ಷಿ ಹಣ್ಣಾಗುವ ಮೊದಲು ಬಲಿತ ಕಾಯಿಯನ್ನು ಕಿತ್ತು ರುದ್ರಾಕ್ಷಿಯ ಎಲ್ಲ ಮುಖಗಳನ್ನೂ ಚಾಕುವಿನಿಂದ ಒರೆದು ಒಂದು ಮುಖದ ರುದ್ರಾಕ್ಷಿಯನ್ನು ಮಾಡಿ ಮೋಸ ಮಾಡುವುದೂ ಇದೆ. ತುಂಬಾ ಅಪರೂಪವಾಗಿ ದೊರೆಯುವ ಈ ಏಕಮುಖಿ ರುದ್ರಾಕ್ಷಿ ಯನ್ನು ಬಹಳಸುಲಭವಾಗಿ ಗುರುತಿಸಬಹುದು. ಇದರ ಮೇಲ್ಭಾಗದಲ್ಲಿ ಪರಶಿವನ ಚಿಹ್ನೆ ಗಳಾದ ಓಂಕಾರ, ತ್ರಿಶೂಲ, ಲಿಂಗ ಸರ್ಪಗಳ ಗುರುತುಗಳಿರುತ್ತವೆ. ಇತ್ತೀಚೆಗೆ ಶಿವಲಿಂಗ ಮತ್ತು ಸರ್ಪವಿರುವ ರುದ್ರಾಕ್ಷಿಯನ್ನು ಪ್ಲಾಸ್ಟಿಕ್‌ನಿಂದ ತಯಾರಿಸಿ, ಕೊಳ್ಳಲು ಕುತೂಹಲ ತೋರುವವರಿಗೆ ಮೋಸ ಮಾಡುವವರೂ ಇದ್ದಾರೆ. ಪಶ್ಚಿಮ ಬಂಗಾಳದ ಸಬಯಾಸಿ ಸೇನ್ ಎಂಬುವವರ ಬಳಿ ಏಕಮುಖಿ ರುದ್ರಾಕ್ಷಿಯ ಮಾಲೆ ಇದೆಯೆಂದೂ ಹೇಳಲಾಗಿದೆ.

*(ಮುಂದುವರಿಯುವುದು)*

### ಒಗಟಿನ ವಿನೋದ

ಪಾಂಡವರ ಪತ್ನಿ ದ್ರೌಪತಿ । ಕೌರವರ ಪತ್ನಿ ಭಾನುಮತಿ । ಹರಿಶ್ಚಂದ್ರನ ಪತ್ನಿ ತಾರಾಮತಿ । ನಮ್ಮ ..... ರ ಪತ್ನಿ ನಾನೇ ಸೇನಾಪತಿ.

ರೂಪದಲ್ಲಿ ಕಾಮ । ಮಡದಿಯ ಮೇಲೆ ಪ್ರೇಮ । ನಾ ಹೇಳೋದು ನಮ್ಮ....ರ ನಾಮ।।

ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅಗತ್ಯ.
-ಸಿಸಿರೋ

ಸೆಪ್ಟೆಂಬರ್ 2016ರಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ, ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

ಸೆ. 1 ಅನುಶ್ರೀ, ಮೈಸೂರು
ಸೆ. 2 ಗೀತಾ, ಮೈಸೂರು
ಸೆ. 3 ನಂದಿನಿ, ಮಂಡ್ಯ
ಸೆ. 4 ಕೋಕಿಲಾ, ಬೆಂಗಳೂರು
ಸೆ. 5 ಅಮೃತಾ, ಹಾಸನ
ಸೆ. 6 ಕುಸುಮ, ಶಿವಮೊಗ್ಗ
ಸೆ. 7 ಶ್ರೀಗೌರಿ, ತುಮಕೂರು
ಸೆ. 8 ರೂಪಾ, ಮೈಸೂರು
ಸೆ. 9 ಕಾಂಚನಾ, ಮಂಡ್ಯ
ಸೆ. 10 ಪುಷ್ಪ, ಕೋಲಾರ
ಸೆ. 11. ಗಜಲಕ್ಷ್ಮಿ, ಕೋಲಾರ
ಸೆ. 12 ಜಯಶ್ರೀ ಮಿಶ್ರಾ, ಮೈಸೂರು
ಸೆ. 13 ಈಶ್ವರಿ, ಹಾಸನ
ಸೆ. 14 ಭಾರ್ಗವಿ, ಬೆಂಗಳೂರು
ಸೆ. 15 ಅಂಜನಾ, ಹುಬ್ಬಳ್ಳಿ
ಸೆ. 16 ಗಂಗಾ, ಮದ್ದೂರು
ಸೆ. 17 ಚಾಂದನಿ, ಮೈಸೂರು
ಸೆ. 18 ಕಾಂತಾಮಣಿ, ಬೆಂಗಳೂರು
ಸೆ. 19 ಗಿರಿಜಾ, ಹುಬ್ಬಳ್ಳಿ
ಸೆ. 20 ಇಂದುಮತಿ, ಮಂಡ್ಯ
ಸೆ. 21 ಆಶಾದೇವಿ, ಹುಬ್ಬಳ್ಳಿ
ಸೆ. 22 ಜ್ಯೋತಿ, ಹಾಸನ
ಸೆ. 23 ಮಂಜುಳಾ, ತುಮಕೂರು
ಸೆ. 24 ದೀಪಿಕಾ, ಶಿವಮೊಗ್ಗ
ಸೆ. 25 ಪಂಕಜಾ, ಮೈಸೂರು
ಸೆ. 26 ಊರ್ಮಿಳಾ, ಬಳ್ಳಾರಿ
ಸೆ. 27 ಕಲಾ, ಹುಣಸೂರು
ಸೆ. 28 ಚಂದ್ರಿಕಾ, ತಿಪಟೂರು
ಸೆ. 29 ಗೌತಮಿ, ಬೆಂಗಳೂರು
ಸೆ. 30 ಪಾರ್ವತಿ, ಬಳ್ಳಾರಿ



ಮಾತಿನಲ್ಲಿ ಮಾತ್ರ ವಿಧೇಯತೆ ಇದ್ದರೆ ಸಾಲದು, ನಡತೆಯಲ್ಲಿಯೂ ಇರಬೇಕು.
-ವಿಲ್ಸನ್



## ಸಹನೆ ರೂಢಿಸಿಕೊಂಡಲ್ಲಿ ಯಶಸ್ಸು ಸಾಧ್ಯ

ಜೀವನದಲ್ಲಿ ಸಹನೆ ರೂಢಿಸಿಕೊಳ್ಳಬೇಕು. ಅದಿಲ್ಲದೆ ಯಾವ ವ್ಯಕ್ತಿಯೇ ಆಗಲಿ ಯಶಸ್ಸು ಸಾಧಿಸುವುದು ದುಸ್ಸಾಧ್ಯ. ಯಾವ ಕೆಲಸವನ್ನೂ ಮಾಡಲಾರ. ದುಡುಕುತನದಿಂದ ವ್ಯವಹರಿಸಿದರೆ ಪ್ರತಿಕೂಲ ಫಲಿತಾಂಶಗಳೇ ಎದುರಾಗಬಹುದು. ಮನುಷ್ಯನಲ್ಲಿ ಪರಿವರ್ತನೆ ತರಲು ವರ್ಷಾನುಗಟ್ಟಲೆಯ ಸಹನೆ, ಬುದ್ಧಿವಂತಿಕೆಯಿಂದ ಮುಂದಾಗಬೇಕು. ತ್ವರಿತ ಪರಿವರ್ತನೆಗೆ ಪ್ರಯತ್ನಿಸಬಾರದು. ಹಾಗೇನಾದರೂ ಆದರೆ ಅದು ಶಾಶ್ವತವಾಗಿರಲಾರದು. ಗಾಯ ಮಾಯಲು ಕೆಲಕಾಲ ಕಾಯಬೇಕಲ್ಲವೇ. ಹಾಗೇ ಜೀವನದಲ್ಲಾದ ಗಾಯ ಮಾಯಲು ಸ್ವಲ್ಪ ಕಾಲ ಅಗತ್ಯ. ಬಲವಂತವಾಗಿ ಪರಿವರ್ತಿಸಲು ಪ್ರಯತ್ನಿಸಿದರೆ ಹೆಚ್ಚು ಕಾಲ ಹಿಡಿಯಬಹುದು. ಉತ್ತಮ ರೀತಿಯಲ್ಲಿ ಪರಿವರ್ತನೆಗೆ ಹೆಚ್ಚು ಕಾಲಾವಧಿ ಹಿಡಿಯುತ್ತದೆ.

ಮಾನಸಿಕ ಪ್ರೌಢತೆ ಸಹನೆಗೆ ಗುರುತು! ಅಪಕ್ವವಾಗಿ, ಅಸಹನೆಯಿಂದ ಪರಿವರ್ತನೆಗೆ ಪ್ರಯತ್ನಿಸಿದರೆ, ಫಲಿತಾಂಶ-ಮಾನಸಿಕ ಸಮಸ್ಯೆಗಳು ಎದುರಾಗಬಹುದು. ಪರಿವರ್ತನೆ, ಬದಲಾವಣೆ ಜೀವನ ಪರ್ಯಂತ ನಡೆಯುವ ನಿರಂತರ ಪ್ರಕ್ರಿಯೆ.

ಆದ್ದರಿಂದ ನೀವು ಆತ್ಮಬಲ, ಕ್ರಿಯಾತ್ಮಕ ಸಂಕಲ್ಪಶಕ್ತಿ, ನಂಬಿಕೆ, ಸಹನೆ, ಛಲದಿಂದ ಸಾಧಿಸಲಾಗದ್ದು ಎಂಬುದು ಏನೂ ಇರುವುದಿಲ್ಲ. ಆದರೆ ಬೆಳವಣಿಗೆಗೆ ಸ್ವಲ್ಪ ಕಾಲ ಹಿಡಿಯುತ್ತದೆ. ಅರಳುವ ಹೂವುಗಳು, ಊಳುವ ನೆಲ, ನಾವು ಬೆಳೆಸುವ ಸಂಬಂಧಗಳು ಎಲ್ಲಕ್ಕೂ ಕಾಲವೆಂಬುದು ಕೂಡಿ ಬರಬೇಕು. ಉನ್ನತ ವ್ಯಕ್ತಿಗಳಾಗಲು ವರ್ಷಗಳೇ ಬೇಕಾಗಬಹುದು. ಶ್ರಮ ಪಡಬೇಕಾಗಿರುತ್ತದೆ. ಯಾರೂ ಅಷ್ಟು ಸುಲಭವಾಗಿ ಉನ್ನತ ವ್ಯಕ್ತಿಗಳಾಗಲು ಸಾಧ್ಯವಿಲ್ಲ.

ಯಶೋದಾ

ಗೌರಿ ಗಣೇಶ ಹಬ್ಬದ ಶುಭಾಶಯಗಳು. ಮಹಿಳೆಯರಿಗಾಗಿಯೇ ಆರಂಭಿಸಿರುವ ಮಹಿಳಾ ವಿಶೇಷ ತಿಂಗಳ ಪತ್ರಿಕೆಗೆ ಶುಭಾಶಯಗಳು.

SITES FOR SALE
T. Narasipura Main Road
Rs. 799/- per Sq.ft.
Ready for Registration
Open for Bulk & Individual
Contact:
94810-68476
984530-77579

## ಕಳಲೆ ಅನಘಾ ವಿಶ್ವ ಚಾಂಪಿಯನ್‌ಶಿಪ್‌ಗೆ ಆಯ್ಕೆ



ರಷ್ಯಾದ ಜಾರ್ಜಿಯಾದಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್ ಚೆಸ್ ಟೂರ್ನಿಗೆ ಕಳಲೆ ಅನಘಾ ಆಯ್ಕೆಯಾಗಿದ್ದಾಳೆ. ವಿವಿಧ ವಯೋಮಿತಿಯಲ್ಲಿ ನಡೆಯುವ ಟೂರ್ನಿ ಯಲ್ಲಿ ಎಂಟು ವರ್ಷದೊಳಗಿನ ಬಾಲಕಿಯರ ವಿಭಾಗದಿಂದ ಅನಘಾ ಸ್ಪರ್ಧಿಸುತ್ತಿದ್ದಾಳೆ. ಈ ಟೂರ್ನಿಯು ಅಕ್ಟೋಬರ್ 18ರಿಂದ 31ರ ವರೆಗೆ ನಡೆಯಲಿದೆ. ಅಮೋಘವಾಗಿ ಆಟವಾಡಿ ಪ್ರಶಸ್ತಿಯೊಂದಿಗೆ ಹಿಂದಿರುಗಿ ವಾಪಸ್ಸು ಬಾ ಎಂದು ಮಹಿಳಾ ವಿಶೇಷ ಬಳಗ ಅನಘಾಗೆ ಶುಭವನ್ನು ಕೋರಿದೆ.

ನಂಜನಗೂಡು ತಾಲ್ಲೂಕು ಕಳಲೆ ಗ್ರಾಮ ಆಚಾರ್ಯ ಗುರುಕುಲ ವಿದ್ಯಾಪೀಠ ಪ್ರಾಥಮಿಕ ಶಾಲೆಯಲ್ಲಿ ಮೂರನೇ ತರಗತಿ ಓದುತ್ತಿರುವ ಅನಘಾಗೆ ಚೆಸ್ ಆಟವೆಂದರೆ ಪಂಚಪ್ರಾಣ. ಕಳಲೆ ಗ್ರಾಮದ ನಿವಾಸಿಗಳಾದ ಕೆ.ಎಂ. ಗೋಪಿನಾಥ್ ಹಾಗೂ ರೂಪಾರವರ ಏಕೈಕ ಪುತ್ರಿಯೇ ಕಳಲೆ ಗೋಪಿನಾಥ್ ರೂಪಾ ಅನಘಾ. ತಂದೆಯಾದ ಗೋಪಿನಾಥ್ ಗ್ರಾಮದಲ್ಲಿ ಸುಮಾರು 15 ವರ್ಷಗಳಿಂದಲೂ ಮಕ್ಕಳಿಗೆ ಉಚಿತವಾಗಿ ಚೆಸ್ ಆಟವನ್ನು ಕಲಿಸುವ ಅಭ್ಯಾಸವನ್ನು ಇಟ್ಟುಕೊಂಡಿದ್ದಾರೆ. ಹಲವಾರು ಟೂರ್ನಿಗಳಲ್ಲಿ ಮಕ್ಕಳನ್ನು ಭಾಗವಹಿಸಿ ಪ್ರಶಸ್ತಿಗಳನ್ನು ತರಿಸುವಲ್ಲಿ ಸಫಲರಾಗಿದ್ದಾರೆ.

ತಂದೆ ಕಲಿಸುವ ಚೆಸ್ ಆಟದಿಂದ ಅನಘಾ ಪ್ರೇರಿತಳಾಗಿ ಚಿಕ್ಕ ವಯಸ್ಸಿನಲ್ಲೇ ಚೆಸ್ ಆಟಕ್ಕೆ ಮನಸೋತು ತನ್ನ ಐದನೇ ವಯಸ್ಸಿನಿಂದಲೇ ರಾಜ್ಯಮಟ್ಟ ಹಾಗೂ ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದು ಚಾಂಪಿಯನ್ ಆಗಿರುತ್ತಾಳೆ. ಈಕೆಗೆ ಗ್ರಾಂಡ್‌ಮಾಸ್ಟರ್ ಆಗಬೇಕೆಂಬ ಆಸೆ ಈಡೇರಲಿ ಎಂಬುದೇ ನಮ್ಮೆಲ್ಲರ ಬಯಕೆ.





## ರಿಯೋ ಒಲಿಂಪಿಕ್ಸ್‌ನಲ್ಲಿ ಮಹಿಳೆ ಸೈ



ಇತ್ತೀಚೆಗೆ ಮುಕ್ತಾಯಗೊಂಡ ರಿಯೋ ಒಲಿಂಪಿಕ್ಸ್‌ನಲ್ಲಿ ಭಾರತ ದೇಶದ ಮಹಿಳಾ ಕ್ರೀಡಾಪಟುಗಳು ಭಾಗವಹಿಸಿದ್ದು ಬ್ಯಾಂಡ್ಮಿಂಟನ್ ತಾರೆ ಪಿ.ವಿ. ಸಿಂಧು ಬೆಳ್ಳಿ ಪದಕ ಜಯಿಸಿ ಐತಿಹಾಸಿಕ ಸಾಧನೆ ಮಾಡಿ ಭಾರತೀಯರ ಮನಸ್ಸಿನಲ್ಲಿ ಉಳಿಯುವಂತಾಗಿದ್ದಾರೆ. ತವರಿಗೆ ಬಂದಾಗ ಅವರಿಗೆ ದೊರೆತ ಸ್ವಾಗತ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಘೋಷಿಸಿದ ಬಹುಮಾನಗಳಿಗೆ ನಿಜಕ್ಕೂ ಅವರು ಅರ್ಹರು.



ರಿಯೋ ಒಲಿಂಪಿಕ್ಸ್‌ನಲ್ಲಿ ಮೊದಲ ಪದಕ ಗಳಿಸಿದ ಭಾರತದ ಮಹಿಳಾ ಕುಸ್ತಿ ಪಟು ಸಾಕ್ಷಿ ಮಲ್ಲಿಕ್ ಕಂಚಿನ ಪದಕವನ್ನು ಪಡೆದು ಭಾರತದ ಕುಸ್ತಿಯಲ್ಲಿ ಹೊಸ ಅಧ್ಯಾಯನವನ್ನು ಬರೆದರು. ತವರಿನಲ್ಲಿ ಅವರಿಗೂ ದೊರೆತ ಸ್ವಾಗತ ಹಾಗೂ ಘೋಷಿಸಿದ ಬಹುಮಾನಗಳಿಗೆ ಅವರು ಅರ್ಹರು.

ಪಿ.ವಿ. ಸಿಂಧು ಹಾಗೂ ಸಾಕ್ಷಿ ಮಲ್ಲಿಕ್ ಇಬ್ಬರೂ ಸಾಮಾನ್ಯ ಕುಟುಂಬದಿಂದ ಬಂದು ಸತತ ಪ್ರಯತ್ನ, ಏಕಾಗ್ರತೆ, ಶಿಸ್ತು, ಶ್ರಮ ವಹಿಸಿದ್ದಕ್ಕೆ ರಿಯೋ ಒಲಿಂಪಿಕ್ಸ್ ಅನ್ನು ಮರೆಯುವಂತಿಲ್ಲ. ಇವರು ಬೇರೆ ಮಹಿಳಾ ಕ್ರೀಡಾಪಟುಗಳಿಗೆ ಮಾದರಿಯಾಗಿರುವುದಕ್ಕೆ ಮಹಿಳಾ ವಿಶೇಷ ಬಳಗದಿಂದ ಹ್ಯಾಟ್ಸ್ ಆಫ್.

ನೂತನವಾಗಿ ಆರಂಭಿಸಿರುವ ಮಹಿಳಾ ವಿಶೇಷ ತಿಂಗಳ ಪತ್ರಿಕೆಗೆ ಶುಭವಾಗಲಿ. ಸರ್ವರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು.

## PAVAN JEWELLERS



No. L46/B, Ashoka Road, Mysore 570 001
(Opp. Kanika Mahal Choultry)
Ph: 0821-4269247, 2444247

ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನಿಂದಲೇ ಮಹಿಳಾ ವಿಶೇಷ ತಿಂಗಳ ಪತ್ರಿಕೆ ಉದಯಿಸಿರುವುದಕ್ಕೆ ಶುಭಾಶಯಗಳು.

## SRI MATHAJI ELECTRICALS

Wholesale & Retail Dealers in
**Electrical Goods**

**Mohanlal Seervi**
Mob.: 94487-87135

Old Shop: No. 359/2, K.R. Hospital Road, Mysore-1
New Shop: No. 527-M/7, 3rd Cross, Dodda Vokkalageri
K.R. Hospital Road, Mysore-1. Ph: 2525612, 2522612, 2527512



September, 2016 MAHILA VISHESHA
Decl No. MAG (Declaration)/16/2016-17

ಈ ಪತ್ರಿಕೆ ಎಲ್ಲರಿಗೂ ದಾರಿದೀಪವಾಗಿ ಒಳ್ಳೆಯ ಸಂದೇಶ, ಮಾರ್ಗದರ್ಶನವನ್ನು ನೀಡಿ, ಮನೆ ಮನೆಗೂ ಮಾತಾಗುವಂತೆ ಉತ್ತಮ ಪತ್ರಿಕೆಯಾಗಲಿ. ಮಹಿಳೆಯರಿಗಂತೂ ಆತ್ಮಸ್ಥೈರ್ಯವನ್ನು ತುಂಬಲಿ. ಗೌರಿಗಣೇಶ ಹಬ್ಬದ ಶುಭಾಶಯಗಳು.

# HARI JEWELLERS

### 916 Hallmark Gold & Silver Ornaments



No. 59, Ashoka Road
Mysore 570 001
Ph: 0821-2446525, 4269537

### CREDIT CARDS ACCEPTED

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. E-mail: mahilavishesha@yahoo.com
Web: www.mahilavishesha.in Editor: **H.V. Venkatasubbarao**
Mob.: 88803-34444, Decl No. MAG (Declaration)/16/2016-17